ಕಾಗದ ಬಂದಿದೆ ನಮ್ಮ ಕಮಲನಾಭನದು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 183.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 308.
3. **Note:** Lyrics are same in both the reference books above. Singer has followed these wordings.
4. **Note:** These lyrics are not available in the books of Shri Betageri Krishna Sharma and Shri Bengeri Huchha Rayaru.

ರಾಗ: (ಮುಸಲ್ಮಾನಿ) ಗಮನಶ್ರಮ ತಾಳ: ಏಕ

ಕಾಗದ ಬಂದಿದೆ ನಮ್ಮ ಕಮಲನಾಭನದು, ಈ
ಕಾಗದವನ್ನು ಓದಿಕೊಂಡು ಕಾಲವ ಕಳೆಯಿರೊ || ಪ ||

ಕಾಮ ಕ್ರೋಧವ ಬಿಡಿರೆಂಬೊ ಕಾಗದ ಬಂದಿದೆ
ನೇಮ ನಿಷ್ಠೆಯೊಳಿರಿರೆಂಬೊ ಕಾಗದ ಬಂದಿದೆ
ತಾಮಸ ಜನರ ಕೂಡದಿರೆಂಬೋ ಕಾಗದ ಬಂದಿದೆ, ನಮ್ಮ
ಕಾಮನಯ್ಯನು ತಾನೆ ಬರೆದ ಕಾಗದ ಬಂದಿದೆ || 1 ||

ಹೆಣ್ಣಿನಾಸೆ ಬಿಡಿರೆಂಬೊ ಕಾಗದ ಬಂದಿದೆ
ಹೊನ್ನಿನಾಸೆ ಬಿಡಿರೆಂಬೊ ಕಾಗದ ಬಂದಿದೆ
ಮಣ್ಣಿನಾಸೆ ಬಿಡಿರೆಂಬೊ ಕಾಗದ ಬಂದಿದೆ, ನಮ್ಮ
ಕಮಲನಾಭನು ತಾನೆ ಬರೆದ ಕಾಗದ ಬಂದಿದೆ || 2 ||

ಗೆಜ್ಜೆ ಕಾಲ್ಕಟ್ಟಿರೆಂಬೊ ಕಾಗದ ಬಂದಿದೆ
ಹೆಜ್ಜೆ ಹೆಜ್ಜೆಗೆ ಹರಿಯೆನ್ನಿರೆಂಬೊ ಕಾಗದ ಬಂದಿದೆ
ಲಜ್ಜೆ ಬಿಟ್ಟು ಕುಣಿಯಿರೆಂಬೊ ಕಾಗದ ಬಂದಿದೆ, ನಮ್ಮ
ಪುರಂದರ ವಿಠ್ಠಲ ತಾನೆ ಬರೆದ ಕಾಗದ ಬಂದಿದೆ || 3 ||

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ಕಾಗದ – ಆದೇಶ; ಶಾಸ್ತ್ರ (ಶಂಸನ, ಶಾಸನ).

ಕಾಮನಯ್ಯನು ತಾನೆ ಬರೆದ – ಮನ್ಮಥನ ತಂದೆಯಾದ ನಾರಾಯಣನಿಂದಲೇ ವೇದವು ಪ್ರವೃತ್ತವಾಗಿದ್ದು, ಎಲ್ಲ ಶಾಸ್ತ್ರಗಳೂ ವೇದೋಪಬೃಂಹಣಕ್ಕಾಗಿಯೇ ಇವೆ.

ಗೆಜ್ಜೆ ಕಾಲ್ಕಟ್ಟಿರಿ – ಹರಿಸಂಕೀರ್ತನಕ್ಕಾಗಿ.

Classification: Keerthane
Ankita: purandara vittala
Location: NA
Category: Jeevanoddhara
Sub-Category: kagada, padma, sittu, Narayana, Krishna, hennu, bangara, bhumi, gejje, kAma, jana, nachike,
Pravachana: NA
Explanation: Dr. Vijayendra Desai, Dharwad.